

“ಬಹುವಾಗಿ ಬಯಸಿದ ಆ ಜಿಂಕೆಯನ್ನು ಹಿಡಿದು, ಹೀಗೆ ಹೋಗಿ ಹಾಗೆ ಬಂದು ಬಿಡುವೆ ಲಕ್ಷ್ಮಣಾ” ’ಎನ್ನುತ್ತಾ ಜಿಂಕೆ ಜಿಗಿದು ಹೋದ ದಿಕ್ಕಿನತ್ತ ರೊಯ್ಯನೆ ಬಾಣ ಬಿಟ್ಟಂತೆ ಹೋದನು ಅಣ್ಣ. ನೀಲಾಗಸದಲಿ ಮಿಂಚೊಂದು ಹೊಳೆದು ಮರೆಯಾಗುವ ವೇಗದಲಿ.

‘ಅರ್ಧ ತಾಸು ಕಳೆದರೂ ಅಣ್ಣ ಏಕೆ ಇನ್ನೂ ಬರಲಿಲ್ಲ ಎಂಬ ಕಳವಳದಲ್ಲಿ ಪರ್ಣಕುಟಿಯ ಬಲಭಾಗದಲಿ ನೆಟ್ಟ ಬಾಳೆ ಗಿಡಗಳಿಗೆ ನೀರು ಹಾಯಿಸುತ್ತಾ ಪಕ್ಕದ ಶಿಲಾಮಂಟಪಕೆ ಹಬ್ಬಿಸಿದ ಮಲ್ಲಿಗೆ ಅಂಬುಗಳನು ಸರಿಪಡಿಸುತ್ತಿರುವಾಗ, “ಹಾ ಸೀತಾ...! ಹಾ ಲಕ್ಷ್ಮಣಾ..!“ ಎಂಬ ನೋವಿನ ದನಿ ಕಾಡಿನ ಅಬೇಧ್ಯ ಮೌನವನ್ನು ಸೀಳಿ ಬಂತು. ಬೇಟೆಗಾರನ ಬಾಣದ ಗುರಿ ತಪ್ಪದೇ ಬಲಿಯ ಹೃದಯವನು ಸೀಳಿದಾಗ ಹೊರಟ ಆರ್ದ್ರ ದನಿಯಂತಿತ್ತು ಅದು. ನಮ್ಮನ್ನು ನಾಟಿತು. ಸೀತಮ್ಮಾ ಗಾಬರಿಯಿಂದ ಪರ್ಣಕುಟಿಯ ಒಳಗಿನಿಂದ ಓಡಿ ಬಂದವರೇ... “ಓ ಲಕ್ಷ್ಮಣಾ.., ಅಗೋ ಕೇಳಿಸಿಕೋ ನಿಮ್ಮಣ್ಣನ ಆರ್ತ ಸ್ವರವನ್ನು, ಜಿಂಕೆ ಹಿಡಿದು ತರುವ ನೆಪದಲ್ಲಿ ಯಾವುದೋ ಆಪತ್ತಿಗೆ ಸಿಲುಕಿದರೇ.. ನನಗೆ ಭಯವಾಗುತ್ತಿದೆ. ಎದೆ ನಡುಗುತ್ತಿದೆ. ಅಂದು ನಿಮ್ಮಿಬ್ಬರ ನಡುವೆ ಸಿಲುಕಿ ನಲುಗಿದ ಆ ಹೆಣ್ಣ ಆಕ್ರಂದನವೇ ನನಗೆ ಇನ್ನೂ ಕೇಳುತ್ತಿದೆ. ಆ ದುಷ್ಟ ಘಳಿಗೆಯಿಂದ ನಮಗೆ ಮುಳುವಾಗುತ್ತಿದೆ. ಹೋಗು ಬೇಗ ಧಾವಿಸಿ ಹೋಗು. ನಿನ್ನಣ್ಣನ ರಕ್ಷಣೆಗೆ ಓಡು, ತಡಮಾಡಬೇಡ, ಹೊರಡು..” ಸತತವಾಗಿ ಹೀಗೆ ಬಡಬಡಿಸುತ್ತಲೇ, ನಾನಿನ್ನೂ ಆ ಕೂಗಿನ ಸತ್ಯಾಸತ್ಯತೆಯ ಬಗ್ಗೆ ಯೋಚಿಸುತ್ತಿರುವಾಗ ನಾನು ಹೊರಡುವುದಿಲ್ಲವೇನೋ ಎಂದು ಭಾವಿಸಿ, ತಾವೇ ಹೊರಡಲು ಉದ್ಯುಕ್ತರಾಗಿದರು! ತಾಳ್ಮೆಯ ಸೌಮ್ಯಮೂರ್ತಿಯಾಗಿರುವ ನನ್ನತ್ತಿಗೆ ಎಂದೂ ಹೀಗೆ ಉದ್ವಿಗ್ನತೆಗೆ ಒಳಗಾದವರಲ್ಲ.’

‘ಅತ್ತಿಗೆಯೇನೋ ಹೋಗುವಂತೆ ಆಗ್ರಹಿಸುತ್ತಿದ್ದಾರೆ. ಆದರೆ, ಅಣ್ಣನ ಅಪ್ಪಣೆಯಾಗಿದೆ, ನಾನಿವರನ್ನು ಒಂಟಿಯಾಗಿ ಬಿಟ್ಟು ಹೋಗಬಾರದೆಂದು. ಅಲ್ಲದೇ ರಾಮನೆಂದರೆ ಸಾಮಾನ್ಯನೇ? ನರನೇ? ಅತುಲಭುಜಬಲ ಪರಾಕ್ರಮಿ, ದೈವಾಂಶ ಸಂಭೂತನೆಂದೇ ಜನಮಾನ್ಯ. ಸಕಲ ಜನವಂದ್ಯ. ಅದರಲ್ಲೂ ಧನುರ್ಧಾರಿಯಾಗಿ ಹೋಗಿರುವವನು ತಾವೇ ಆಪತ್ತಿಗೆ ಸಿಲುಕಿದರೆ ಬಾಣ ಪ್ರಯೋಗಿಸಿರನೇ? ಇನ್ನು ರಾಮಬಾಣದ ಗುರಿ ಎಂದಾದರೂ ತಪ್ಪುವುದುಂಟೆ? ಅಣ್ಣನ ಆಗ್ರಹಕ್ಕೆ ಸಿಲುಕಿ ಯಾರಾದರು ಉಳಿದಾರೆಯೇ? ಅಲ್ಲದೇ ಅಣ್ಣ ತನ್ನ ಸಹಾಯಕ್ಕಾಗಿ ನಮ್ಮನ್ನು ಕರೆದಾನೇ! ಅತ್ತಿಗೆಗೆ ಏಕೆ ಈ ಸಂಶಯ. ಇದರಲ್ಲೇನೋ ಮೋಸವಿದೆ ಎನಿಸುತ್ತಿದೆಯಲ್ಲಾ. ಹೀಗೆ ಯೋಚಿಸುತ್ತಾ, ತಲೆಕೊಡವಿಕೊಂಡ ನನ್ನನ್ನು “ಎಷ್ಟು ದಿನಗಳಿಂದ ಈ ಸಮಯಕ್ಕಾಗಿ ಕಾಯುತ್ತಿದ್ದೆ ಲಕ್ಷ್ಮಣಾ? ನನ್ನ ತಂಗಿ ಊರ್ಮಿಳೆಗೆ ನಿನ್ನ ಈ ವಿಕೃತ ಮನೋಭೀಪ್ಸೆಯ ಬಗ್ಗೆ ತಿಳಿದುದಾದರೆ, ಕಣ್ಣೆತ್ತಿಯೂ ನಿನ್ನನ್ನು ನೋಡುವುದಿಲ್ಲ, ಅರಿತುಕೋ. ರಾಮನಿಲ್ಲದಾಗ ನನ್ನನ್ನು ಪಡೆಯಬೇಕೆಂದು ಮಾಡಿರುವೆಯಾ? ಅಯ್ಯೋ ಮೂಢ, ಇನ್ನು ನಾನಲ್ಲ, ನಿನಗೆ ಮತ್ತು ನಿನ್ನ ಅಣ್ಣನಂತಹ ಸ್ತ್ರೀ ನಿಷ್ಠುರಿಗೆ ಈ ಭುವಿಯ ಮೇಲಿನ ಯಾವ ಹೆಣ್ಣೂ ಒಲಿದು ಬರುವುದಿಲ್ಲ ತಿಳಿದುಕೋ...” ಎಂದ ಸೀತಮ್ಮ ಮರ್ಮಾಂಗ ಬೇಧಿಸುವಂತಹ ಮೊನಚು ಮಾತಿನಿಂದ ಪುನಃ ಹಳಿದರಲ್ಲ!!’

‘ಅಯ್ಯೋ ಶಿವಾಶಿವಾ! ಎಂಥಾ ಘನಘೋರ ಆರೋಪ ನನ್ನ ಮೇಲೆ!? ಅದೂ ಏಕಪತ್ನೀವ್ರತಸ್ಥನಾದ, ಸೀತಾಮಾತೆಯನ್ನು ತನ್ನ ಹೃದಯ ಮಂದಿರದೊಳಗಿಟ್ಟು ಪ್ರೇಮಪೂಜೆಯನು ಮಾಡುತ್ತಿರುವ ಶ್ರೀ ರಾಮಚಂದ್ರನ ಮೇಲೆ!! ಛೇ, ಅತ್ತಿಗೆ ಏಕೆ ಹೀಗೆ ಮನೋವಿಭ್ರಮಣೆಗೆ ಸಿಲುಕಿದಂತೆ ಬಡಬಡಾಯಿಸುತ್ತಿದ್ದಾರೆ! ಅಣ್ಣನಾಗಲೀ ನಾನಾಗಲೀ ಅಂತಹ ತಪ್ಪೇನು ಮಾಡಿದೆವು? ನಮ್ಮ ವಿವಾಹವಾಗಿರುವ ಕುರಿತು ಪರಿಪರಿಯಾಗಿ ತಿಳಿಸಿ ಹೇಳಿದರೂ ಅರಿತುಕೊಳ್ಳದ ಆ ಮಾಯಾಂಗನೆಯನ್ನು ಶಿಕ್ಷಿಸಿದ್ದು ತಪ್ಪೇ? ಅದೂ ಆಕೆ ನಮ್ಮಿಬ್ಬರನ್ನೂ ದಾಟಿ, ಅತ್ತಿಗೆಯ ಜೀವಕ್ಕೇ ಆಪತ್ತು ತರಲು ಮುಂದೆ ನಡೆದಾಗ ನಾವು ಕೈ ಕಟ್ಟಿ ಕೂರಬೇಕಿತ್ತೆ? ಅವಳ ಮುಂದಲೆ, ಚೂಪು ಮೂಗನ್ನು ತುಂಡರಿಸದೇ ಬೇರೆ ದಾರಿ ಏನಿತ್ತು? ಕೊಂದಿದ್ದರೆ ಸ್ತ್ರೀ ಹತ್ಯಾದೋಷ ಬಾಧಿಸುತ್ತಿರಲಿಲ್ಲವೇ? ಪರಮ ಸಾಧ್ವಿ ಅತ್ತಿಗೆಯ ಮನಸ್ಸನ್ನು ಆ ರಾಕ್ಷಸಸ್ತ್ರೀ ಈ ಪರಿ ಆವರಿಸಿಬಿಟ್ಟಿರುವಳಲ್ಲಾ! ಅಯ್ಯೋ, ಈ ಮಾತೆಯ ಹೃದಯ ಇಷ್ಟೊಂದು ಮೃದುವೇ? ಮುಂದೇನು ಗತಿಯಪ್ಪಾ. ವನವಾಸ ಮುಗಿಸಿ ನಗರಕ್ಕೆ ಮರಳಿದ ಮೇಲೆ ಅಯೋಧ್ಯೆಯ ಅನಭಿಷಿಕ್ತ ಅರಸನ ಪಟ್ಟದರಸಿಯಾಗಿ ಕೋಟ್ಯಾಂತರ ಜನರನ್ನೂ, ನೂರಾರು ಯುದ್ಧಗಳನ್ನೂ, ನಮ್ಮ ಚಿಕ್ಕಮ್ಮ ಕೈಕೇಯಿ ಮತ್ತವಳ ದಾಸಿ ಮಂಥರೆಯಂತಹವರನ್ನೂ ಈ ಮೃದು ಹೃದಯಿ, ಹೇಗೆ ನಿಭಾಯಿಸುವರು!?’

‘ಲಕ್ಷ್ಮಣಾ, ನಿನ್ನ ಮನದ ಸಂಚನ್ನು ಪಕ್ಕಕ್ಕಿಟ್ಟು ನಡೆ. ಇಲ್ಲಾ, ನೀನಿಲ್ಲೇ ಯೋಚಿಸುತ್ತಾ ಕುಳಿತಿರು. ನಾನು ಇದೋ ಈಗ ಬಂದೆ” ಎಂದವರೇ ಉತ್ತರೀಯ ಹೊದ್ದು, ಪಾದುಕೆ ಧರಿಸಿ ಹೊರಟೇ ಬಿಟ್ಟಿದ್ದರಲ್ಲಾ?!

‘ಲಕ್ಷ್ಮಣಾ ಏನು ಯೋಚಿಸುತ್ತಿರುವೆ? ಮೊನಚು ಮಾತಿನಿಂದ ನೊಂದುಕೊಂಡೆಯಾ? ಯೋಚಿಸುತ್ತಾ ನೋವುಂಡು ಕೂರಬೇಕಾದ ಸಮಯವಲ್ಲ ಇದು. ಹೋಗು ಕಾರ್ಯಪ್ರವೃತ್ತನಾಗು‘’ ಎಂದಿತು ನನ್ನ ಮನಸ್ಸು ಅಥವಾ ಊರ್ಮಿಯ ನುಡಿಗಳು. “ಅತ್ತಿಗೆ ಕ್ಷಮಿಸಿ, ನಿಮ್ಮನ್ನು ವೃಥಾ ನೋಯಿಸಿದೆ. ಆದರೆ ಅಣ್ಣನ ಆಣತಿಯಾಗಿದೆ. ನಾನು ನಿಮಗೆ ಕಾವಲಿರಬೇಕೆಂದು. ನೀವು ಸಾವಧಾನದಿಂದ ಇರುವಂತವರಾಗಿ. ನಿಮ್ಮ ಯೋಗಕ್ಷೇಮದ ಜವಾಬ್ದಾರಿ ನಮಗೆ ಬಿಡಿ. ಅಣ್ಣನೇನು ಅಷ್ಟು ರಣಹೇಡಿಯೇ, ನನ್ನನ್ನೂ ನಿಮ್ಮನ್ನೂ ತನ್ನ ರಕ್ಷಣೆಗಾಗಿ ಕೂಗಿ ಕರೆಯುವಷ್ಟು? ಸ್ವಲ್ಪ ವಿವೇಚನೆಯಿಂದ ಆಲೋಚಿಸಿರಿ” ಎನ್ನುತ್ತಿದ್ದಂತೇ.. ಸಿಡಿಲಿನ ದನಿಯಲ್ಲಿ, ”ನಿನ್ನ ಉಪದೇಶ ನನಗೆ ಬೇಕಿಲ್ಲ. ಏ ಅವಿವೇಕಿ, ಬುದ್ಧಿವಂತಿಕೆಯ ಪಾಠ ನನಗೆ ಮಾಡಲು ಬರಬೇಡ. ಇಷ್ಟು ವರುಷ ನಿಮ್ಮೊಡನೆ ವನವಾಸ ಮಾಡಿ ಕಠಿಣವಾಗಿರುವವಳಿಗೆ ಸರಿತಪ್ಪುಗಳ ವಿವೇಚನೆ ತುಂಬಾ ಚೆನ್ನಾಗಿ ತಿಳಿದಿದೆ.” ಎಂದವರೇ ಪರ್ಣಕುಟಿಯ ಹೊಸ್ತಿಲು ದಾಟಿ ಮೆಟ್ಟಿಲಿಳಿಯಲು ತೊಡಗಿದರು. ನಾನು ಏನೂ ತೋಚದವನಾಗಿ ಬಿಟ್ಟೆ. ತಕ್ಷಣವೇ ಅತ್ತಿಗೆಯ ಪಾದಗಳಿಗೆ ನಮಸ್ಕರಿಸಿ, “ಅಮ್ಮಾ.., ಸೀತಮ್ಮಾ..., ನೀವು ನೊಂದುಕೊಳ್ಳಬೇಡಿ. ವೃಥಾ ದೂಷಿಸಬೇಡಿ. ಇಗೋ ನಾನೇ ಹೊರಟೆ. ಆದರೆ ಒಂದು ವಿನಂತಿ. ದಯಮಾಡಿ ಇದನ್ನು ಮಾತ್ರ ನಿರಾಕರಿಸಬೇಡಿ. ನಾನಾಗಲೀ, ಅಣ್ಣನಾಗಲೀ ಹಿಂದಿರುಗಿ ಬರುವವರೆಗೂ ಮಂತ್ರಿಸಿದ ಹುಡಿಯನ್ನು ಉದುರಿಸಿ ಕೊರೆಯುವ ಗೆರೆಯನ್ನು ದಾಟಬೇಡಿ. ಯಾವ ಕಾರಣಕ್ಕೂ ಆ ವೃತ್ತ ದಾಟಿ ಪರ್ಣಕುಟಿಯಿಂದ ಹೊರಬರಬೇಡಿ. ಕೊರೆದ ವೃತ್ತದೊಳಗೆ, ಒಂದು ವಿಶೇಷ ಹುಡಿಯನ್ನು ಹಾಕಿರುತ್ತೇನೆ. ಅಣ್ಣ ಮತ್ತು ನಾನು, ಈ ಕಾಡಿನೊಳಗೆ ಅಜ್ಞಾತ ವಾಸಮಾಡುತ್ತಿರುವ ಸಾಧು ಸತ್ಪುರಷರಿಂದ ಕಲಿತಿರುವ ಹೊಸ ವಿದ್ಯೆಯಮ್ಮಾ ಇದು. ನಮ್ಮ ಮೂವರ ಹೊರತಾಗಿ ಬೇರೆ ಯಾರಾದರೂ ಇದರ ಮೂಲಕ ಒಳಪ್ರವೇಶ ಮಾಡಲು ಯತ್ನಿಸಿದರೆ ಅವರ ಶರೀರದೊಡನೆ ಸಮೀಕರಿಸಿಕೊಳ್ಳುವ ಈ ಪುಡಿಯು ಅವರು ಉರಿದು ಭಸ್ಮವಾಗುವಂತೆ ಮಾಡುತ್ತದೆ. ಇದರ ಬಗ್ಗೆ ಅನಂತರನಿಮಗೆ ನಿಧಾನವಾಗಿ ಹೇಳುವೆವು. ಅಮ್ಮಾ, ದಯಮಾಡಿ ನೆನಪಿಡಿ ನೀವು ಮಾತ್ರ ಮಂಕು ಕವಿಸಿಕೊಂಡು ಈ ರೇಖೆಯನ್ನು ಯಾವ ಕಾರಣಕ್ಕೂ ದಾಟದಿರಿ. ನಾವಂತೂ ಬಂದೇ ಬರುವೆವು” ಎಂದು ನಮಸ್ಕರಿಸಿ ಕೇಳಿಕೊಂಡ ಮೇಲೆ ಅತ್ತಿಗೆ ಪರ್ಣಕುಟಿಯ ಒಳಹೋದದ್ದು.

‘ಆದರೂ ಕಾಡಿನ ಈ ಒರಟು ನೆಲವನ್ನು ಉಜ್ಜಿ, ಗೆರೆ ಕೊರೆದು ಗುರುತು ಮಾಡುವುದು ಅಷ್ಟೊಂದು ಸುಲಭವೆನಿಸುತ್ತಿಲ್ಲ! ಈಗಿನ ಮನಕ್ಷೋಭೆಯಿಂದ ನನ್ನ ಸಾಮರ್ಥ್ಯ ಕುಗ್ಗಿಬಿಟ್ಟಿದೆಯೇ? ಅಥವಾ, ಹೆಣ್ಣನ್ನು ಹೀಗೆ ಗೆರೆ ಕೊರೆದು ನಿರ್ಬಂಧಿಸುವುದು ಸುಲಭವಲ್ಲ ಎಂದು ಇದರರ್ಥವೇ?!’ ವೃತ್ತ ಪೂರ್ಣಗೊಳ್ಳುವಷ್ಟರಲ್ಲಿ ಲಕ್ಷ್ಮಣನ ಹಣೆಯಿಂದ ಬೆವರು ಬಸಿಯತೊಡಗಿತು...

ಪ್ರತಿಕ್ರಿಯಿಸಿ: feedback@sudha.co.in